ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊನ್ನಾಳಿ

**ಸಿ.ಸಿ. 1588/2021**

ಸಾಕ್ಷಿದಾರರ ಹೇಳಿಕೆಃ

**ಹೆಸರು** : ಡಾ.ಸುದೀರ್ ಕುಮಾರ್ ಹೆಚ್ ಸಿ ಚಾಸಾಃ **9** ಪ್ರಾಸಾಃ **9**

**ತಂದೆಯ ಹೆಸರು** : ಚಕ್ರಪಾಣಿ ಶೆಟ್ಟಿ

**ವಯಸ್ಸು** : **52** ವರ್ಷ

**ವೃತ್ತಿ** : ವೈದ್ಯಾಧಿಕಾರಿಗಳು

**ವಾಸಸ್ಥಳ** : ದಾವಣಗೆರೆ

ದಿನಾಂಕಃ **22-12-2025** ರಂದು ಸಾಕ್ಷಿಯನ್ನು ಕರೆದು ಪ್ರಮಾಣವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆ :-ಮಾನ್ಯ ಸ.ಸ.ಅ. ರವರಿಂದ:-</u>

ನಾನು ಜುಲೈ 2015 ರಿಂದ ಜುಲೈ 2025 ರವರೆಗೆ ಹೊನ್ನಾಳಿಯ ಸರ್ಕಾರಿ ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದ್ದೆನು.

ದಿನಾಂಕಃ 05-02-2021 ರಂದು ಸಂಜೆ 05-30 ಗಂಟೆ ಸಮಯದಲ್ಲಿ ಚಾಸಾ-1 ಮತ್ತು 5 ರವರು ಹಲ್ಲೆಯ ಇತಿಹಾಸದಲ್ಲಿ ಚಿಕಿತ್ಸೆ ಪಡೆಯಲು ಹೊನ್ನಾಳಿ ಸರ್ಕಾರಿ ಆಸ್ಪತ್ರೆಗೆ ಬಂದಿದ್ದು, ನಂತರ ನಾನು ಚಾಸಾ-1 ರವರನ್ನು ಪರೀಕ್ಷೆ ಮಾಡಿ ಅವರ ತಲೆಗೆ ಗಾಯವಾಗಿದ್ದರಿಂದ ಅವರನ್ನು ಶಿವಮೊಗ್ಗ ಮೆಗ್ಗಾನ್ ಆಸ್ಪತ್ರೆಗೆ ಸಿ ಟಿ ಸ್ಕ್ಯಾನ್ ಮಾಡಲು ಕಳುಹಿಸಿಕೊಟ್ಟಿದ್ದು ಆ ಪ್ರಕಾರ ಚಾಸಾ-1 ರವರು ಆಸ್ಪತ್ರೆಗೆ ಹೋಗಿ ಸಿ ಟಿ ಸ್ಕ್ಯಾನ್ ಮಾಡಿಸಿಕೊಂಡು ಬಂದು ವರದಿಯನ್ನು ಹಾಜರುಪಡಿಸಿದ್ದು ನಂತರ ಚಾಸಾ-1 ಮತ್ತು ಸಿ ಟಿ ಸ್ಕ್ಯಾನ್ ವರದಿಯನ್ನು ಪರೀಕ್ಷಿಸಿದಾಗ ಚಾಸಾ-1 ರವರಿಗೆ ಈ ಕೆಳಕಂಡ ಗಾಯಗಳಾಗಿದ್ದವು.

1. ತಲೆಯ ಎಡಭಾಗದಲ್ಲಿ 8 ಇಂಟು 3 ಇಂಟು 2 ಸೆ.ಮೀ. ಹರಿದ ಗಾಯ
2. ಬಲಮೊಣಕಾಲಿನ ಹತ್ತಿರ ನೋವು
3. ಸಿ ಟಿ ಸ್ಕ್ಯಾನ್ ನಲ್ಲಿ ತಲೆಯ ಸಾಮಾನ್ಯ ಊತ ಇರುವುದು ಕಂಡುಬಂದಿದ್ದು

ಸದರಿ ಗಾಯಗಳು ಸಾಮಾನ್ಯ ಸ್ವರೂಪದ ಗಾಯಗಳೆಂದು ಅಭಿಪ್ರಾಯ ಪಟ್ಟಿರುತ್ತೇನೆ . ಈ ಬಗ್ಗೆ ಗಾಯದ ಪ್ರಮಾಣ ಪತ್ರವನ್ನು ನೀಡಿರುತ್ತೇನೆ.

ನಂತರ ಚಾಸಾ-5 ರವರನ್ನು ಪರೀಕ್ಷೆ ಮಾಡಿ ಮತ್ತು ಎಕ್ಸ್ ರೇ ಅನ್ನು ತೆಗೆದ ನಂತರ ಸದರಿಯವರಿಗೆ ಈ ಕೆಳಕಂಡ ಗಾಯಗಳಾಗಿದ್ದವು.

1. ಎಕ್ಸ್ ರೇ ಅನ್ನು ನೋಡಿದಾಗ ಬೆನ್ನಿನ ಮಧ್ಯಭಾಗದಲ್ಲಿ ನೋವು ಇದ್ದು
2. ಎಡಭುಜದ ಮೇಲ್ಭಾದಲ್ಲಿ 1 ಇಂಟು 1 ಸೆ.ಮೀ ನ ತರಚಿದ ಗಾಯ

ಸದರಿ ಗಾಯಗಳು ಸಾಮಾನ್ಯ ಸ್ವರೂಪದ ಗಾಯಗಳೆಂದು ಅಭಿಪ್ರಾಯ ಪಟ್ಟಿರುತ್ತೇನೆ . ಈ ಬಗ್ಗೆ ಗಾಯದ ಪ್ರಮಾಣ ಪತ್ರವನ್ನು ನೀಡಿರುತ್ತೇನೆ. ಮು.ಮಾ.1 ಮತ್ತು 2 ರಿಂದ ಹೊಡೆದರೆ ಚಾಸಾ-1 ಮತ್ತು 5 ರವರಿಗೆ ಆದಂತಹ ಗಾಯಗಳು ಆಗುವ ಸಾಧ್ಯತೆ ಇರುತ್ತದೆ.

ಚಾಸಾ-1 ರವರ ಗಾಯದ ಪ್ರಮಾಣ ಪತ್ರವನ್ನು ನಿಪಿ-26 ಎಂದು, ಸಾಕ್ಷಿಯ ಸಹಿಯನ್ನು ನಿಪಿ-26(ಎ) ಎಂದು, ಚಾಸಾ-5 ರವರ ಗಾಯದ ಪ್ರಮಾಣ ಪತ್ರವನ್ನು ನಿಪಿ-27 ಎಂದು, ಸಾಕ್ಷಿಯ ಸಹಿಯನ್ನು ನಿಪಿ-27(ಎ) ಎಂದು, ಚಾಸಾ-1 ರವರ ಸಿ ಟಿ ಸ್ಕ್ಯಾನ್ ನಿಪಿ-10 ಮತ್ತು ಚಾಸಾ-5 ರವರ ಎಕ್ಸ್ ರೇ ನಿಪಿ-15 ಅನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

<u>ಪಾಟೀ ಸವಾಲು:- ಆರೋಪಿ ಪರ ವಕೀಲರಿಂದ:-</u>

ಚಾಸಾ-1 ಮತ್ತು 5 ರವರಿಗೆ ನಾನು ಚಿಕಿತ್ಸೆಯನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ. ಚಾಸಾ-1 ಮತ್ತು 5 ರವರು ಹಲ್ಲೆಯ ಹಿನ್ನೆಲೆಯಲ್ಲಿ ಗಾಯಗೊಂಡಿರುವ ವಿಚಾರವನ್ನು ಸಹ ನನ್ನ ಹತ್ತಿರ ತಿಳಿಸಿಲ್ಲ ಎಂದರೆ ಸರಿಯಲ್ಲ. ಚಾಸಾ-1 ರವರನ್ನು ಸಿ ಟಿ ಸ್ಕ್ಯಾನ್ ಗಾಗಿ ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಗೆ ಕಳುಹಿಸಿಕೊಟ್ಟಿಲ್ಲ ಎಂದರೆ ಸರಿಯಲ್ಲ. ಚಾಸಾ-5 ರವರಿಗೆ ಎಕ್ಸ್ ರೇ ಯನ್ನು ತೆಗೆದಿಲ್ಲ ಮತ್ತು ಚಾಸಾ-1 ಮತ್ತು 5 ರವರಿಗೆ ನಿಪಿ-26 ಮತ್ತು 27 ರಲ್ಲಿ ನಮೂದಾಗಿರುವಂತೆ ಯಾವುದೇ ಗಾಯಗಳು ಆಗಿರುವುದಿಲ್ಲ ನಾನು ಚಾಸಾ-1 ಮತ್ತು 5 ರವರ ಮಾತುಕೇಳಿಕೊಂಡು ಸುಳ್ಳು ಗಾಯದ ಪ್ರಮಾಣ ಪತ್ರವನ್ನು ನೀಡಿದ್ದೇನೆ ಎಂದರೆ ಸರಿಯಲ್ಲ. ಮು.ಮಾ.1 ಮತ್ತು 2 ರಿಂದ ಹೊಡೆದರೆ ಚಾಸಾ-1 ಮತ್ತು 5 ರವರಿಗೆ ಆಗಿರುವ

ಗಾಯಗಳು ಆಗುವ ಸಾಧ್ಯತೆ ಇರುತ್ತದೆ. ಚಾಸಾ-1 ರವರಿಗೆ ತಲೆಯಲ್ಲಿ ಆಗಿರುವ ಗಾಯವನ್ನು ಹೊರತುಪಡಿಸಿ ಉಳಿದ ಗಾಯಗಳು ಮತ್ತು ಚಾಸಾ-5 ರವರಿಗೆ ಆದಂತಹ ಗಾಯಗಳು ಸಾಮಾನ್ಯವಾಗಿ ಯಾವುದಾದರೂ ಒಬ್ಬ ವ್ಯಕ್ತಿಯು ಆಯ ತಪ್ಪಿ ಕಲ್ಲಿನ ಮೇಲೆ ಅಥವಾ ಗಟ್ಟಿಯಾದ ಪ್ರದೇಶದಲ್ಲಿ ಬಿದ್ದರೆ ಆಗುವ ಸಾಧ್ಯತೆ ಇದೆ ಎಂದರೆ ಸರಿ. ಚಾಸಾ-1 ಮತ್ತು 5 ರವರಿಗೆ ನಾನು ಯಾವುದೇ ಚಿಕಿತ್ಸೆಯನ್ನು ಕೊಡದಿದ್ದರೂ ಸಹ ಕೊಟ್ಟಿದ್ದೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ .

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.